ಅವರ ಹಿಂದೆ ಹೋಗಬೇಕಾಗುವುದು".

"ನೀನು ಹೇಳ್ತಿರೋದು ತುಂಬಾ ಸರಿಯಾಗಿದೆ!" ಶ್ರೀಕಂಠ ಹೇಳಿದ, "ಆದ್ರೆ ನಾನು ಅದುವರೆಗೆ ಬದುಕಿರಲ್ಲ ಅಂಥ ಅನ್ನಿಸುತ್ತೆ. ನನಗೆ ನನ್ನ ಚಿಂತೆಯಿಲ್ಲ. ಆದ್ರೆ ರಾಮ್ ಕೌಲ್ ಬಂಗ್ಲೆಯ ಹೆಸರಿಗೆ ಕಳಂಕ ಬಂದರೆ ಎಂಬ ಭಯವಾಗ್ತಿದೆ... ಒಂದು ವೇಳೆ ನನ್ನ ಪಾಲನ್ನು ಯಾರೋ ಕೊಂಡರೆಂದು ತಿಳಿ, ಆಗೇನು ಮಾಡ್ತೀಯ?" ನಾಥಜಿ ಜಡವಾಗಿ ಕೂತಿದ್ದ. ಹತ್ತು–ಹದಿನೈದು ನಿಮಿಷಗಳ ಕಾಲ ಅವನ ಬಾಯಿಯಿಂದ ಒಂದು ಶಬ್ದ ಸಹ ಹೊರಡಲಿಲ್ಲ. ಶ್ರೀಕಂಠ ಎದ್ದು ಅಂಗಿಯ ಸುಕ್ಕುಗಳನ್ನು ಸರಿಮಾಡಿಕೊಂಡು ನಾಥಜಿಗೆ ಹೇಳಿದ, "ಬಿಡುವಿನಲ್ಲಿ ಯೋಚಿಸು, ನೀವಿಬ್ಬರು ಗಂಡಹೆಂಡತಿ ಕೂತು, ಯಾವುದು ಸರಿ ಎಂದು ಯೋಚಿಸಿ. ಒಬ್ಬನಂತೂ ಇಡೀ ಮನೆಯನ್ನು ಕೊಳ್ಳಲು ಸಿದ್ಧನಿದ್ದಾನೆ. ಇನ್ನೊಬ್ಬ ನನ್ನ ಭಾಗದ ಮನೆಗೆ ಇಪ್ಪತ್ತೈದು ಸಾವಿರ ಕೊಡುವವನಿದ್ದಾನೆ. ಇಬ್ಬರೂ ಮುಸಲ್ಮಾನರಾಗಿದ್ದಾರೆ. ದಿಲ್ಲಿಯಲ್ಲಿರುವವನಿಗೆ ಸಹ, ನಿನ್ನ ಹಿಸ್ಸೆಯನ್ನು ಏನು ಮಾಡ್ತೀಯ ಅಂತ ವಿಚಾರಿಸಿ ಪತ್ರ ಬರೀತಿದ್ದೇನೆ." ಹೀಗೆಂದು ಶ್ರೀಕಂಠ ಹೊರಡಲನುವಾದ.

"ಈಗ ಎಲ್ಲಿಗೆ ಹೋಗ್ತಿದ್ದೀರ? ಊಟ ಮಾಡಿ ಹೋಗಿ!" ನಾಥಜಿ ಹೇಳಿದ, "ಕೂತ್ಕೊಳ್ಳಿ, ಊಟ ಮಾಡಿ. ಅದೃಷ್ಟದಲ್ಲಿ ಬರೆದಂತಾಗುತ್ತೆ".

"ಆಗಬೇಕಾದ್ದನ್ನು ತಡೆಯುವವರು ಯಾರು? ಆದರೆ, ನನಗೆ ಸ್ವಲ್ಪವೂ ಹಸಿವೆಯಿಲ್ಲ. ತಲೆ ನೋಯುತ್ತಿದೆ. ನಾನು ನಿದ್ರೆ ಮಾಡಬೇಕು." ಹೀಗೆಂದು ಶ್ರೀಕಂಠ ತನ್ನ ಕೋಣೆಗೆ ಬಂದ. ಬಾಗಿಲನ್ನು ಮುಚ್ಚಿದ ನಂತರ, ದೀಪವಾರಿಸಿ, ಹಾಸಿಗೆ ಮೇಲೆ ಹೊರಳಿದ. ಅದೇ ಮೌನ ಚಿತ್ರ, ಅದೇ ಪೇಂಟಿಂಗ್ ಮತ್ತೆ ಎದುರು ಸುಳಿಯಿತು. ಒಂದು ವಿಶಾಲ ವೃಕ್ಷ, ಆದರೆ ಬೇರುಗಳಿಲ್ಲ! ಚಿಕ್ಕ ದೊಡ್ಡ ಗರಗಸಗಳು ಅಳಿದುಳಿದ ಬೇರುಗಳನ್ನು ತುಂಡು ಮಾಡುತ್ತಿದ್ದವು, ಆ ಬೇರುಗಳಿಂದಲೇ ವೃಕ್ಷ ಇನ್ನೂ ನಿಂತಿದೆ.

ತನ್ನ ನಗರ ಶ್ರೀನಗರದ ಶಂಕರಾಚಾರ್ಯ ಬೆಟ್ಟ, ವಾಸ್ತವವಾಗಿ ಒಂದು ಸುಪ್ತ ಜ್ವಾಲಾಮುಖಿಯಾಗಿದೆ, ಅದು ಯಾವುದೇ ಕ್ಷಣ ಒಡೆದು ಶತಮಾನಗಳಿಂದ ತನ್ನೊಳಗೆ ಅಡಗಿಸಿಕೊಂಡಿದ್ದ ಲಾವಾರಸವನ್ನು ನಾಲ್ಕೂ ಕಡೆಗೆ ಹರಿಸಿ ಸರ್ವನಾಶಕ್ಕೆ ಕಾರಣವಾಗುತ್ತದೆ ಎಂದು ಬಾಲ್ಯದಲ್ಲಿ ಶ್ರೀಕಂಠ ಕೇಳಿದ್ದ. ಆದರೆ, ಈ ಅರವತ್ತು ವರ್ಷಗಳಲ್ಲಿ ಜ್ವಾಲಾಮುಖಿ ಒಡೆಯಲಿಲ್ಲ, ಆದರೆ ಆಗಾಗ ಇದರಿಂದ ಲಾವಾರಸ ಒಸರುತ್ತಿತ್ತು. ಇಂದು ಮೊದಲ ಬಾರಿಗೆ ಅವನಿಗೆ, ಶಂಕರಾಚಾರ್ಯ ಬೆಟ್ಟ ಬಿರುಕು ಬಿಟ್ಟಿದೆ, ಒಳಗಿನ ಲಾವಾರಸ ವ್ಯಾಪಿಸುತ್ತಿದೆ, ಆಕಾಶವನ್ನು ಹೊಗೆ ಮತ್ತು ವಿಷದ ಗಾಳಿ ಘೇರಾಯಿಸಿದೆ ಎಂದು ಅನ್ನಿಸುತ್ತಿತ್ತು.

ಇಂದೂ ಸಹ ನಾಥಜಿಯ ಪತ್ರ ಬರಲಿಲ್ಲ. ಮಗನಿಗೆ, 'ಕಾಶ್ಮೀರದವರಿಗೆ ತಂತಿ ಕಳುಹಿಸು' ಎಂದು ಹೇಳುವ ಮನಸ್ಸಾಯಿತು. ಆದರೆ, ಅವನು ಮಗ ಮತ್ತು ಸೊಸೆಯ ಎದುರು ಕಾಶ್ಮೀರದ ಹೆಸರು ಹೇಳುವುದಕ್ಕೂ ಹೆದರುತ್ತಿದ್ದ. ಕಾಶ್ಮೀರದ ಬಗ್ಗೆ ಪ್ರಸ್ತಾಪಿಸುತ್ತಲೇ ಗಂಡಹೆಂಡತಿ ಅವನನ್ನು ಹುಚ್ಚು ನಾಯಿಗಳಂತೆ ಕಚ್ಚಲು ಬರುತ್ತಿದ್ದರು.

"ನಮ್ಮದಾಗಿರದ ಕಾಶ್ಮೀರಕ್ಕೆ ಬೆಂಕಿ ಬೀಳಲಿ."

ಶ್ರೀಕಂಠ ಖುದ್ದು ಭಾರವಾದ ಹೆಜ್ಜೆಗಳನ್ನು ಹಾಕುತ್ತಾ ತಂತಿ ಕಚೇರಿಗೆ ಹೋಗಿ ತಂತಿ ಕಳುಹಿಸಿದ, 'ವರೀಡ್. ವೈರ್ ವೆಲ್‌ಫೇರ್, ಶ್ರೀಕಂಠ.'

ಮೂರು ದಿನಗಳು ಹೇಗೋ ಕಳೆದವು. ಅವನು ಆ ಮೂರು ರಾತ್ರಿಗಳನ್ನು ಮುಳ್ಳುಗಳ ಮೇಲೆ ಹೊರಳಾಡಿ ಕಳೆದ. ಅವನ ಮನಸ್ಸಿನಲ್ಲಿ ಚಿತ್ರ ವಿಚಿತ್ರ ವಿಚಾರಗಳು ಮೂಡುತ್ತಿದ್ದವು. ತಮ್ಮ–ಅತ್ತಿಗೆ ವಿಷ ಕುಡಿದು ತನ್ನನ್ನು ಬದುಕಿರುವಂತೆ ನರಕಕ್ಕೆ ತಳ್ಳಲಿಲ್ಲ ತಾನೇ! ನಾನು ಈ ಕಠಿಣ ತೀರ್ಮಾನವನ್ನು ಕೈಗೊಳ್ಳಲೇ ಬಾರದಿತ್ತು. ನಾನು ಸತ್ತ ನಂತರ ಆಗುವುದು ಆಗುತ್ತಿತ್ತು. ಶ್ರೀಕಂಠನ ಪರಿಸ್ಥಿತಿ ಹುಚ್ಚರಂತಾಗಿತ್ತು. ಇನ್ನು ಕೆಲವು ದಿನಗಳಲ್ಲಿ ಸಹೋದರರನಿಂದ ಉತ್ತರ ಬರದಿದ್ದರೆ, ನಾನು ನನ್ನ ತೀರ್ಮಾನವನ್ನು ಬದಲಿಸಿದ್ದೇನೆ ಎಂದು ತಾನೇ ಪತ್ರ ಬರೆಯುವುದಾಗಿ ಯೋಚಿಸಿದ.

ತಂತಿಗೆ ಉತ್ತರ ಬಂದೇ ಬಿಟ್ಟಿತು. ಉತ್ತರ ತುಂಬಾ ಸಂಕ್ಷಿಪ್ತವಾಗಿತ್ತು. ತಂತಿಯನ್ನು ನೋಡುತ್ತಲೇ, ಖಜಾನೆ ಸಿಕ್ಕಿದಷ್ಟು ಸಂತಸವಾಯಿತು. ಪತ್ರದಲ್ಲಿ ಬರೆಯಲಾಗಿತ್ತು: 'ಎಲ್ಲರೂ ಕ್ಷೇಮ. ಐದು ದಿನಗಳ ಹಿಂದೆಯೇ ವಿವರವಾಗಿ ಬರೆದು ಪತ್ರವನ್ನು ಹಾಕಿದ್ದೇನೆ.'

ತಂತಿ ಓದಿ, ತಾನು ಖುಷಿ ಪಡಬೇಕೋ ಅಥವಾ